*O.S./161/2025*
*P.W-1*

(ಸಾಕ್ಷಿಗೆ ದಿನಾಂಕ: 05.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆಃ ಶ್ರೀ ಡಿ.ಕೆ.ಜಿ., ವಾದಿ ಪರ ವಕೀಲರಿಂದಃ</u>**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನನ್ನ ದಾವೆಗೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ವಂಶವೃಕ್ಷ ಪ್ರಮಾಣ ಪತ್ರವನ್ನು ನಿ.ಪಿ.1 ಎಂದು, ಹಕ್ಕು ಬದಲಾವಣೆ ವಹಿಯನ್ನು ನಿ.ಪಿ.2 ಎಂದು, ಪಹಣಿಯನ್ನು ನಿ.ಪಿ.3 ಎಂದು, ಕುಣಿಗಲ್ ಪ್ರಧಾನ ಸಿವಿಲ್ ನ್ಯಾಯಾಲಯದ ಮೂಲ ದಾವೆ ಸಂಖ್ಯೆ 209/2022ರಲ್ಲಿನ ವಾದ ಪತ್ರದ ದೃಢೀಕೃತ ನಕಲನ್ನು ನಿ.ಪಿ.4 ಎಂದು, ಸದರಿ ದಾವೆಯಲ್ಲಿನ ರಾಜೀ ಅರ್ಜಿಯ ದೃಢೀಕೃತ ನಕಲನ್ನು ನಿ.ಪಿ.5 ಎಂದು, ಸದರಿ ದಾವೆಯಲ್ಲಿನ ಆದೇಶ ಪ್ರತಿಯ ದೃಢೀಕೃತ ನಕಲನ್ನು ನಿ.ಪಿ.6 ಎಂದು, ಹಕ್ಕು ಬದಲಾವಣೆ ವಹಿಯನ್ನು ನಿ.ಪಿ.7 ಎಂದು, ಮತ್ತೊಂದು ಪಹಣಿಯನ್ನು ನಿ.ಪಿ.8 ಎಂದು, ತುಮಕೂರು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದ RAKUN 608/2021 ಪ್ರಕರಣದ ನಡವಳಿಗಳ ದೃಢೀಕೃತ ನಕಲನ್ನು ನಿ.ಪಿ.9 ಎಂದು, ಸದರಿ ಪ್ರಕರಣದಲ್ಲಿ ಉಪ ವಿಭಾಗಾಧಿಕಾರಿಗಳು ದಿನಾಂಕಃ 25.11.2022 ರಂದು ಹೊರಡಿಸಿದ ಆದೇಶದ ದೃಢೀಕೃತ ನಕಲನ್ನು ನಿ.ಪಿ.10 ಎಂದು, ಕುಣಿಗಲ್ ತಹಸೀಲ್ದಾರ್ ರವರು RRT(DIS) CR 17/2023-24ರಲ್ಲಿ ದಿನಾಂಕಃ 15.02.2024ರಂದು ಹೊರಡಿಸಿದ ಆದೇಶದ ದೃಢೀಕೃತ ನಕಲನ್ನು ನಿ.ಪಿ.11 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ
ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.